RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| | | |
|---|---|---|
| ಭಾಗ-IV | ಬೆಂಗಳೂರು,, ಬುಧವಾರ, ಜೂನ್ ೧೪, ೨೦೧೭ (ಜ್ಯೇಷ್ಠ ೨೪, ಶಕ ವರ್ಷ ೧೯೩೯) | ನಂ. ೫೨೪ |
| Part–IV | Bengaluru, Wednesday, June 14, 2017 (Jyeshta 24, Shaka Varsha 1939) | No. 524 |


**OFFICE OF THE RETURNING OFFICER**

**FOR PRESIDENTIAL ELECTION, 2017**

**PUBLIC NOTICE**

**OF**

**ELECTION TO THE OFFICE OF PRESIDENT OF INDIA**

Whereas a notification under sub-section (1) of section 4 of the Presidential and Vice-Presidential Elections Act, 1952, for the holding of an election to fill the Office of President of India has been issued by the Election Commission, I, Anoop Mishra, the Returning Officer for such election, do hereby give notice that-

(i) nomination papers may be delivered by a candidate or any one of his proposers or seconders to the undersigned at his office in Room No. 18, Ground Floor, Parliament House, New Delhi, or if he is unavoidably absent, to the Assistant Returning Officers, Shri Ravindra Garimella, Joint Secretary or Shri Vinay Kumar Mohan, Director, Lok Sabha Secretariat, at the said office between 11 A.M and 3 P.M on any day (other than a public holiday) not later than the 28$^{th}$ June, 2017;

(ii) each nomination paper shall be accompanied by a certified copy of the entry relating to the candidate in the electoral roll for the Parliamentary Constituency in which the candidate is registered as an elector;

(iii) every candidate shall deposit or cause to be deposited a sum of rupees fifteen thousand only. This amount may be deposited in cash with the Returning Officer at the time of presentation of the nomination paper or deposited earlier in the Reserve Bank of India or in a Government Treasury and in the later case a receipt showing that the said deposit of the sum has been so made is required to be enclosed with the nomination paper;

(iv) forms of nomination papers may be obtained from the above said office at the times aforesaid;

(v) the nomination papers, other than those rejected under sub-section (4) of section 5B of the Act, will be taken up for scrutiny at the said office in Room No. 18, Ground Floor, Parliament House, New Delhi on 29 June, 2017, at 11 A.M;

(vi) the notice of withdrawal of candidatures may be delivered by a candidate, or any one of his proposers of seconders who has been authorized in this behalf in writing by the candidate, to the undersigned at the place specified in paragraph (i) above before three o'clock in the afternoon of 1 July, 2017;

(vii) In the event of the election being contested, the poll will be taken on 17 July, 2017 between the hours of 10 A.M and 5 P.M at the places of polling fixed under the rules.

*(signature)*
***ANOOP MISHRA***
*Returning Officer*
*For Election to the Office of*
*President of India, 2017*
(Secretary General Lok Sabha)

New Delhi,
*Dated, the 14th June, 2017*

**ಚುನಾವಣಾಧಿಕಾರಿಗಳ ಕಚೇರಿ, ರಾಷ್ಟ್ರಪತಿಗಳ ಚುನಾವಣೆ, 2017**

**ಭಾರತದ ರಾಷ್ಟ್ರಪತಿಗಳ ಅಧಿಕಾರ ಪದದ ಚುನಾವಣೆಗೆ ಸಂಬಂಧಿಸಿದ**

**ಸಾರ್ವಜನಿಕ ನೋಟೀಸು**

ರಾಷ್ಟ್ರಪತಿಗಳ ಮತ್ತು ಉಪ-ರಾಷ್ಟ್ರಪತಿಗಳ ಚುನಾವಣಾ ಅಧಿನಿಯಮ, 1952ರ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಭಾರತದ ರಾಷ್ಟ್ರಪತಿಯವರ ಅಧಿಕಾರ ಪದವನ್ನು ತುಂಬಲು ಚುನಾವಣೆಯನ್ನು ನಡೆಸುವುದಕ್ಕಾಗಿ ಭಾರತ ಚುನಾವಣಾ ಆಯೋಗವು ಒಂದು ಅಧಿಸೂಚನೆಯನ್ನು ಹೊರಡಿಸಿರುವುದರಿಂದ, ಅಂತಹ ಚುನಾವಣೆಗೆ ಚುನಾವಣಾ ಅಧಿಕಾರಿಯಾಗಿರುವ ಅನೂಪ್ ಮಿಶ್ರಾ ಎಂಬ ನಾನು ಈ ಮುಂದಿನಂತೆ ನೋಟೀಸು ನೀಡುತ್ತಿದ್ದೇನೆ-

1. ನಾಮ ನಿರ್ದೇಶನ ಪತ್ರಗಳನ್ನು ಅಭ್ಯರ್ಥಿಯಾಗಲೀ ಅಥವಾ ಅವರ ಸೂಚಕರು ಅಥವಾ ಅನುಮೋದಕರ ಪೈಕಿ ಯಾರೇ ಆಗಲಿ ಈ ಕೆಳಗೆ ಸಹಿ ಮಾಡಿದವರಿಗೆ ಕೊಠಡಿ ಸಂಖ್ಯೆ 18, ನೆಲ ಅಂತಸ್ತು, ಸಂಸತ್ ಭವನ, ನವ ದೆಹಲಿ ಇಲ್ಲಿರುವ ಅವರ ಕಛೇರಿಯಲ್ಲಿ ಅಥವಾ ಅವರು ಅನಿವಾರ್ಯವಾಗಿ ಗೈರು ಹಾಜರಾಗಿದ್ದರೆ, ಸಹಾಯಕ ಚುನಾವಣಾಧಿಕಾರಿಗಳಾದ ಶ್ರೀ ರವೀಂದ್ರ ಗಾರಿಮೆಲ್ಲಾ, ಜಂಟಿ ಕಾರ್ಯದರ್ಶಿ ಅಥವಾ ಶ್ರೀ ವಿನಯ್ ಕುಮಾರ್ ಮೋಹನ್, ನಿರ್ದೇಶಕರು, ಲೋಕಸಭಾ ಸಚಿವಾಲಯ, ಇವರಿಗೆ ಸದರಿ ಕಛೇರಿಯಲ್ಲಿ (ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ) ಯಾವುದೇ ದಿನ 2017ನೇ ಜೂನ್, 28ನೇ ತಾರೀಖಿಗೆ ಮೀರದಂತೆ ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯೊಳಗೆ ಸಲ್ಲಿಸಬಹುದು;

2. ಪ್ರತಿಯೊಂದು ನಾಮ ನಿರ್ದೇಶನ ಪತ್ರದ ಜೊತೆಗೆ ಅಭ್ಯರ್ಥಿಯು ಮತದಾರನೆಂದು ನೊಂದಾಯಿತನಾಗಿರುವ ಸಂಸತ್ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅಭ್ಯರ್ಥಿಗೆ ಸಂಬಂಧಪಟ್ಟ ನಮೂದಿನ ಒಂದು ಪ್ರಮಾಣೀಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು;

3. ಪ್ರತಿಯೊಬ್ಬ ಅಭ್ಯರ್ಥಿಯು ಹದಿನೈದು ಸಾವಿರ ರೂಪಾಯಿ ಮೊಬಲಗನ್ನು ಮಾತ್ರ ಠೇವಣಿ ಮಾಡತಕ್ಕದ್ದು ಅಥವಾ ಮಾಡಿಸತಕ್ಕದ್ದು. ಈ ಮೊಬಲಗನ್ನು ನಾಮ ನಿರ್ದೇಶನ ಪತ್ರವನ್ನು ಸಾದರಪಡಿಸುವ ಕಾಲಕ್ಕೆ ಚುನಾವಣಾಧಿಕಾರಿಯ ಬಳಿ ನಗದಾಗಿ ಠೇವಣಿ ಮಾಡಬಹುದು ಅಥವಾ ಮುಂಚಿತವಾಗಿ ಆ ಮೊಬಲಗನ್ನು ಭಾರತದ ರಿಸರ್ವ್ ಬ್ಯಾಂಕಿನಲ್ಲಿ ಅಥವಾ ಸರ್ಕಾರೀ ಖಜಾನೆಯಲ್ಲಿ ಠೇವಣಿ ಮಾಡಬಹುದು ಮತ್ತು ತರುವಾಯದ ಸಂದರ್ಭದಲ್ಲಿ ಆ ಮೊಬಲಗನ್ನು ಹಾಗೆ ಠೇವಣಿ ಮಾಡಲಾಗಿದೆಯೆಂದು ತೋರಿಸುವ ರಸೀದಿಯನ್ನು ನಾಮ ನಿರ್ದೇಶನದ ಪತ್ರಕ್ಕೆ ಲಗತ್ತಿಸುವುದು ಅವಶ್ಯಕವಾಗಿರತ್ತದೆ;

4. ನಾಮ ನಿರ್ದೇಶನ ಪತ್ರದ ನಮೂನೆಗಳನ್ನು ಸದರಿ ಕಛೇರಿಯಿಂದ ಮೇಲೆ ಹೇಳಿದ ವೇಳೆಯಲ್ಲಿ ಪಡೆದುಕೊಳ್ಳಬಹುದು;

5. ಅಧಿನಿಯಮದ 5 ಬಿ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ತಿರಸ್ಕರಿಸಲಾದ ನಾಮ ನಿರ್ದೇಶನ ಪತ್ರಗಳನ್ನು ಹೊರತುಪಡಿಸಿ ಇತರೆ ನಾಮನಿರ್ದೇಶನ ಪತ್ರಗಳನ್ನು ಸದರಿ ಕಛೇರಿಯಲ್ಲಿ ಅಂದರೆ ಕೊಠಡಿ ಸಂಖ್ಯೆ: 18, ನೆಲ ಅಂತಸ್ತು, ಸಂಸತ್ ಭವನ, ನವ ದೆಹಲಿಯಲ್ಲಿ 2017ನೇ ಜೂನ್ 29ನೇ ತಾರೀಖು ಬೆಳಿಗ್ಗೆ 11-00 ಗಂಟೆಗೆ ಪರಿಶೀಲನೆಗಾಗಿ ತೆಗೆದುಕೊಳ್ಳಲಾಗುವುದು;

6. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಅಭ್ಯರ್ಥಿಯು ಅಥವಾ ಈ ಸಂಬಂಧದಲ್ಲಿ ಅಭ್ಯರ್ಥಿಯಿಂದ ಲಿಖಿತದಲ್ಲಿ ಅಧಿಕಾರ ಪಡೆದ ಅವನ ಸೂಚಕರು ಅಥವಾ ಅನುಮೋದಕರ ಪೈಕಿ ಯಾರಾದರೊಬ್ಬರು ಈ ಕೆಳಗೆ ಸಹಿ ಮಾಡಿರುವವರಿಗೆ ಮೇಲಿನ ಪ್ಯಾರಾ (1)ರಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ 2017ನೇ ಜುಲೈ 01ನೇ ತಾರೀಖು ಮಧ್ಯಾಹ್ನ 3-00 ಗಂಟೆಗೆ ಮುಂಚೆ ಸಲ್ಲಿಸಬಹುದು;

7. ಚುನಾವಣೆಗೆ ಸ್ಪರ್ಧೆಯು ನಡೆಯುವಂತಹ ಸಂದರ್ಭದಲ್ಲಿ 2017ನೇ ಜುಲೈ, 17ನೇ ತಾರೀಖು ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-00 ಗಂಟೆಯ ಒಳಗೆ, ನಿಯಮಗಳ ಮೇರೆಗೆ ನಿಗದಿಯಾದ ಮತದಾನದ ಸ್ಥಳಗಳಲ್ಲಿ ಮತದಾನ ನಡೆಸಲಾಗುವುದು.

**ಅನೂಪ್ ಮಿಶ್ರಾ**
ಭಾರತದ ರಾಷ್ಟ್ರಪತಿಗಳ ಅಧಿಕಾರಪದದ ಚುನಾವಣೆ, 2017ರ
ಚುನಾವಣಾಧಿಕಾರಿ ಮತ್ತು ಮಹಾಕಾರ್ಯದರ್ಶಿ, ಲೋಕ ಸಭಾ

ನವದೆಹಲಿ
ದಿನಾಂಕ: 14ನೇ ಜೂನ್ 2017

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 30